106 ಶ್ರೀ ಖಾದರ್. ಯು.ಟಿ. [ಮಂಗಳೂರು]
ಮಾನ್ಯ ಕಾರ್ಮಿಕ ಸಚಿವರು

****

ಅ ಕೇಂದ್ರ ಸರ್ಕಾರವು ರಾಜ್ಯದ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯಕ್ಕೆ ಯಾವ ಯಾವ ಯೋಜನೆಯಡಿ ಹಣವನ್ನು ಬಿಡುಗಡೆ ಮಾಡಿಕೊಡಲಾಗಿದೆ;

ಕೇಂದ್ರ ಸರ್ಕಾರವು ರಾಜ್ಯದ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಯಾವುದೇ ಯೋಜನೆಯಡಿಯಲ್ಲಿ ಇದುವರೆವಿಗೂ ರಾಜ್ಯ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಿರುವುದಿಲ್ಲ.

ಆ ಹಾಗಿದ್ದಲ್ಲಿ, ಅನುಷ್ಠಾನಗೊಳಿಸಿದ ಯೋಜನೆಯ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು [ಜಿಲ್ಲಾವಾರು ವಿವರ ನೀಡುವುದು];

ಉದ್ಭವಿಸುವುದಿಲ್ಲ.

ಇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅಸಂಘಟಿತ ಕಾರ್ಮಿಕರುಗಳಿಗೆ ಅನುಷ್ಠಾನಗೊಂಡ ಯೋಜನೆಗಳು ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉದ್ಭವಿಸುವುದಿಲ್ಲ.

ಈ ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಉದ್ಭವಿಸುವುದಿಲ್ಲ.

108 ಶ್ರೀ ಖಾದರ್. ಯು.ಟಿ. [ಮಂಗಳೂರು]
ಮಾನ್ಯ ಕಾರ್ಮಿಕ ಸಚಿವರು

******

ಅ ಸಂಘಟಿತ ರಾಜ್ಯದಲ್ಲಿರುವ ಅಸಂಘಟಿತ ಬೀಡಿ ಕಾರ್ಮಿಕರಿಗೆ ಯಾವ ಯಾವ ಯೋಜನೆಯಡಿ ವಸತಿ ಸೌಲಭ್ಯವನ್ನು ಒದಗಿಸಿ ಕೊಡುತ್ತಿದೆ;

ಸರ್ಕಾರವು ವಿಶೇಷ ಉದ್ಯೋಗ ಗುಂಪಿನ ಯೋಜನೆಯಡಿಯಲ್ಲಿ ಬೀಡಿ ಕಾರ್ಮಿಕರಿಗಾಗಿ ವಸತಿ ಸೌಲಭ್ಯವನ್ನು ಕಲ್ಪಿಸಿದೆ. ಇದಕ್ಕಾಗಿ ಕೇಂದ್ರ ಸರ್ಕಾರವು ಪರಿಷ್ಕೃತ ಸಮಗ್ರ ವಸತಿ ಯೋಜನೆಯಡಿಯಲ್ಲಿ ರೂ. 40,000/–ಗಳ ಸಹಾಯಧನ ನೀಡುತ್ತಿದ್ದು, ರಾಜ್ಯ ಸರ್ಕಾರವು ಗರಿಷ್ಟ ರೂ. 40,000/–ಗಳ ಸಾಲವನ್ನು ಒದಗಿಸುತ್ತಿದೆ.

ಆ ಹಾಗಿದ್ದಲ್ಲಿ, ಯೋಜನೆಗಳ ವಿವರ ನೀಡುವುದು;

ಕೇಂದ್ರ ಸರ್ಕಾರದಿಂದ ಸಹಾಯ ಧನ: ರೂ.40,000/–

ರಾಜ್ಯ ಸರ್ಕಾರದಿಂದ ಸಾಲ:		ರೂ.40,000/-
ಫಲಾನುಭವಿ ವಂತಿಗೆ:		ರೂ. 5,000/-
ಒಟ್ಟು	:	ರೂ.85,000/-

ಇ ಇದರ ಫಲಾನುಭವಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ನೀಡುವುದು?

2001-2002 ರಿಂದ 2006-07ನೇ ಸಾಲಿನವರೆಗೆ ಒಟ್ಟು 3629 ಬೀಡಿ ಕಾರ್ಮಿಕ ಫಲಾನುಭವಿಗಳಿಗೆ ವಸತಿ ಕಲ್ಪಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

ಕ್ರ ಸಂ.	ಜಿಲ್ಲೆ	ಫಲಾನುಭವಿಗಳ ಸಂಖ್ಯೆ
1	ಬೆಂಗಳೂರು ನಗರ	766
2	ಬೆಳಗಾವಿ	250
3	ಚಾಮರಾಜನಗರ	105
4	ದಾವಣಗೆರೆ	103
5	ಹಾಸನ	107
6	ಮಂಡ್ಯ	1551
7	ರಾಮನಗರ	711
8	ಶಿವಮೊಗ್ಗ	14
9	ಉಡುಪಿ	15
10	ತುಮಕೂರು	7
	ಒಟ್ಟು	3629

109 ಶ್ರೀ. ಖಾದರ್ .ಯು.ಟಿ (ಮಂಗಳೂರು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಆದ್ಯತೆ ಮೇರೆಗೆ ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡ ಕ್ರಮ ಯಾವುವು;